- - ಅಸಲು ದಾವೆ ಸಂ: **60/2024** ಪಿ.ಡಬ್ಲು**-1**

**ದಿ: 11-12-2025 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರಿದ ಪಾಟೀಸವಾಲು: ಶ್ರೀ ಬಿ.ಎಸ್. ಡಿ ವಕೀಲರಿಂದ:-**

1. ಪ್ರತಿವಾದಿಯ ಜಮೀನು ದಾವಾ ಆಸ್ತಿಯ ಉತ್ತರ ದಿಕ್ಕಿಗೆ ಇರುತ್ತದೆ. ಪ್ರತಿವಾದಿಯ ಜಮೀನಿನ ಪಟ್ಟಿ ಪೂರ್ವ ಪಶ್ಚಿಮವಾಗಿ ಪಟ್ಟಿ ಇರುತ್ತದೆ. ಪ್ರತಿವಾದಿಯ ಜಮೀನಿನ ಪೂರ್ವ ದಿಕ್ಕಿಗೆ ಕಿರಾಣಿ ಅಂಗಡಿ

ಉತ್ತಪ್ಪ ಇವರ ಜಮೀನು ಇರುತ್ತದೆ, ಪಶ್ಚಿಮ ದಿಕ್ಕಿಗೆ ಹಳ್ಳ ಬರುತ್ತದೆ, ಉತ್ತರ ದಿಕ್ಕಿಗೆ - ಬಾಲೇಸಾಬ ಇವರ ಜಮೀನು ಬರುತ್ತದೆ, ದಕ್ಷಿಣ ದಿಕ್ಕಿಗೆ ನನ್ನ ಜಮೀನು ಬರುತ್ತದೆ, ಪ್ರತಿವಾದಿಯ ಹೊಲದ ದಕ್ಷಿಣ ದಿಕ್ಕಿಗೆ ನಮ್ಮ 03 ಜನ ಸಹೋದರರ ಹೊಲ ಮತ್ತು ಪಡಶೆಟ್ಟಿ ಶರಣಪ್ಪ ಇವರ ಹೊಲ ಮತ್ತುಶಿವಕುಮಾರ ಇವರ ಹೊಲ ಹತ್ತಿಕೊಂಡಿರುತ್ತದೆ. ನನ್ನ ಜಮೀನು ಅಳತೆ ಮಾಡಿದ ದಾಖಲಾತಿಗಳು ಇರುವುದಿಲ್ಲ. ನಾವು 03 ಜನ ಸಹೋದರರು ವಿಭಾಗ ಮಾಡಿಕೊಳ್ಳುವ ಕಾಲಕ್ಕೆ ಅಳತೆಯನ್ನು ಮಾಡಿಸಿರುತ್ತೇವೆ. ನಾವು ಖಾಸಗಿ ಸರ್ವೆಯರ್ ರವರಿಂದ ಜಮೀನು ಅಳತೆ ಮಾಡಿಸಿದ್ದೇವೆ. ಸರಕಾರಿ ಸರ್ವೆಯರ್ ಅವರಿಂದ ಅಳತೆ ಮಾಡಿಸಿರುವುದಿಲ್ಲ. ನಾವು 03 ಜನ ಸಹೋದರರು ವಿಭಾಗ ಮಾಡಿಕೊಳ್ಳುವ ಕಾಲಕ್ಕೆ ಸರಕಾರಿ ಸರ್ವೆಯರ್ ರವರು ಜಮೀನು ಅಳತೆ ಮಾಡಿ ನಕಾಶೆಯನ್ನು ಕೊಟ್ಟಿರುವುದಿಲ್ಲ.

2. ಯಾವ ಕಾರಣಕ್ಕೆ ಸರಕಾರಿ ಸರ್ವೆಯರಿಂದ ಅಳತೆ ಮಾಡಿಸಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿ ತಕರಾರು ಮಾಡಿರುತ್ತಾರೆ ಎನ್ನುತ್ತಾರೆ. ನೀವು ಸರ್ವೆ ಗಾಗಿ ಅರ್ಜಿಯನ್ನು ಸಲ್ಲಿಸಿದ್ದಿರಾ ಎಮದರೆ ಅರ್ಜಿ ಸಲ್ಲಿಸಿಲ್ಲ ಎಂದು ಹೇಳುತ್ತಾರೆ, ನೀವು ಖಾಸಗಿಯಾಗಿ ಸರ್ವೆ ಮಾಡಿಸಿದ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೀರಾ ಎಮದರೆ ಸಲ್ಲಿಸಿಲ್ಲ ಎನ್ನುತ್ತಾರೆ. ಪ್ರತಿವಾದಿ ಸರ್ವೆ ಅಳತೆಗಾಗಿ ತಕರಾರು ಮಾಡಿದ್ದ ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. 2023 ರಿಂದ ಪ್ರತಿವಾದಿ ತಕರಾರು ಮಾಡುತ್ತಿದ್ದಾರೆ. ಯಾವ ಕಾರಣಕ್ಕೆ ತಕರಾರು ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಆ ಕಡೆ ನಮ್ಮ ಜಮೀನು ಬರುತ್ತದೆ ಎಂದು ತಕರಾರು ಮಾಡುತ್ತಿದ್ದಾರೆ ಎಂದು ಹೇಳುತ್ತಾರೆ. ಈ ದಾವೆಯ ಕಾರಣ ಏನಿದೆ ಎಂದು ಸೂಚಿಸಿದ್ದು ಸಾಕ್ಷಿಯು ಪ್ರತಿವಾದಿ ನಮಗೆ ಏನೂ ಮಾಡಿದರೂ ತಕರಾರು ಮಾಡುತ್ತಾರೆ ಎಂದು ದಾವೆ ಸಲ್ಲಿಸಿದ್ದೇನೆ ಎನ್ನುತ್ತಾರೆ. ಪ್ರತಿವಾದಿ 2023 ರಂದು ತಕರಾರು ಮಾಡಿರುತ್ತಾರೆ ಯಾವ

ದಿನಾಂಕ, ತಿಂಗಳು ಮಾಡಿದ್ದಾರೆ ಎಂದು ಗೊತ್ತಿಲ್ಲ. ಈ ದಾವೆಯನ್ನು ಏನೂ ಪರಿಹಾರ ಕೋರಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ನಮ್ಮ ಜಮೀನು ಚಕ್ ಬಂದಿಯಲ್ಲಿ ನಾವು ಇದ್ದೇವೆ ನಾವು ಏನೂ ಮಾಡಿದರೂ ಪ್ರತಿವಾದಿ ತಕರಾರು ಮಾಡುತ್ತಿದ್ದಾರೆ ಎಂದು ಪರಿಹಾರ ಕೋರಿ ಸಲ್ಲಿಸಿದ್ದೇವೆ ಎನ್ನುತ್ತಾರೆ. ನೀವು ಹೇಳಿದಂತೆ ಪ್ರತಿವಾದಿ ಯಾವುದೇ ತಕರಾರು ಮಾಡಿಲ್ಲ ನೀವು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸಲು ಯಾವುದೆ ವ್ಯಾಜ್ಯ ಕಾರಣ ಉಂಟಾಗಿಲ್ಲ ಎಂದರೆ ಸರಿಯಲ್ಲ. ನೀವು 03 ಜನ ಸಹೋದರರು ಭಾಗ ಮಾಡಿಕೊಂಡಿರುವ ಜಮೀನಿನಲ್ಲಿ ದೇವದುರ್ಗ ರಾಯಚುರು ಮುಖ್ಯ ರಸ್ತೆ ಹಾದು ಹೋಗುತ್ತಿದೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ದೇವದುರ್ಗ ರಾಯಚುರು ಮುಖ್ಯ ರಸ್ತೆ ಹಾದು ಹೋಗುತ್ತಿದೆ ಎಂದರೆ ಸರಿ. ದೇವದುರ್ಗ ರಾಯಚುರು ಮುಖ್ಯ ರಸ್ತೆ ಗೆ ನಿಮ್ಮ ಜಮೀನಿನಲ್ಲಿ ಎಷ್ಟು ಜಮೀನು ಹೋಗಿದೆ ಎಂದರೆ ಸಾಕ್ಷಿಯು 50 ಪೀಟ್ ಹೋಗಿದೆ ಸಾಕ್ಷಿ ಮುಂದುವರಿದು ಯಾವುದೇ ಜಮೀನು ಭೂಸ್ವಾಧಿನವಾಗಿರುವುದಿಲ್ಲ ಎಂದು ಹೇಳುತ್ತಾರೆ. ಪಹಣಿಯ ಪ್ರಕಾರ ದಾವಾ ಜಮೀನು ಅಷ್ಟು ಅಳತೆ ಇರುವುದಿಲ್ಲ ಯಾಕೆಂದರೆ ದೇವದುರ್ಗ ರಾಯಚೂರು ಮುಖ್ಯ ರಸ್ತೆಗೆ ನಿಮ್ಮ ಜಮೀನಿನ ಸ್ವಲ್ಪ ಭಾಗ ಹೋಗಿದೆ ಎಂದರೆ ಸರಿಯಲ್ಲ. ದಾವಾ ಜಮೀನು ಅಳತೆ ಮಾಡಿಸಿದರೆ ಪಹಣಿ ಪ್ರಕಾರ ನಿಮ್ಮ ಜಮೀನು ಕಡಿಮೆ ಬರುತ್ತದೆ ಎಂದು ನಿಮಗೆ ಗೊತ್ತಿರುತ್ತದೆ ಆ ಕಾರಣ ನೀವು ಜಮೀನು ಅಳತೆ ಮಾಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಅವರು ಅಳತೆ ಮಾಡಲು ತಕರಾರು ಮಾಡುತ್ತಾರೆ ಎನ್ನುತ್ತಾರೆ.

2. ನೀವು 03 ಜನ ಸಹೋದರರು ಕಾನೂನು ಪ್ರಕಾರವಾಗಿ ವಿಭಾಗ ಮಾಡಿಕೊಂಡಿದ್ದೀರಿ ಎಂದು ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸಾಕ್ಷಿಯು ನಮ್ಮ ತಂದೆಯವರಿಂದ ದಾಖಲೆಗಳು ಇರುತ್ತವೆ ಎನ್ನುತ್ತಾರೆ. ನೀವು 03 ಜನ ಸಹೋದರರು ವಿಭಾಗ ಮಾಡಿಕೊಂಡಿರುವುದಕ್ಕೆ ನೋಂದಣಿ

ವಿಭಾಗ ಪತ್ರ ಇರುವುದಿಲ್ಲ ಮತ್ತು ನ್ಯಾಯಾಲಯದ ಡಿಕ್ರಿ ಇರುವುದಿಲ್ಲ ಎಂದರೆ ಸಾಕ್ಷಿಯು ಇಲ್ಲ ಎಂದು ಹೇಳುತ್ತಾರೆ. ನೀವು ಮತ್ತು ನಿಮ್ಮ ಸಹೋದರರು ಕಾನೂನುಬದ್ದವಾಗಿ ಮುಟೇಶನ್ ನನ್ನು ಮಾಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. 1-00 ಎಕರೆ ದಾವಾ ಜಮೀನಿಗೆ ನೀವು ಮಾಲೀಕರು ಮತ್ತು ಕಬ್ಜಾದಾರರು ಅಲ್ಲ ಎಂದರೆ ಸರಿಯಲ್ಲ. ನಿಮ್ಮ ದಾವಾ ಜಮೀನಿನಲ್ಲಿ ದೇವದುರ್ಗ ರಾಯಚುರು ಮುಖ್ಯ ರಸ್ತೆ ಹಾದು ಹೋಗುತ್ತಿದ್ದು ಅದರಲ್ಲಿ ಜಮೀನು ಹೋಗಿದ್ದು ಹೆಚ್ಚಿನ ಪ್ರದೇಶ ಪಡೆಯುವ ಉದ್ದೇಶದಿಂದ ಉತ್ತರ ದಿಕ್ಕಿಗೆ ಇರುವ ಪ್ರತಿವಾದಿಯ ಜಮೀನು ಕಬಳಿಸಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿಗೆ ಛಾಯಾ ಚಿತ್ರವನ್ನು ತೋರಿಸಿ ಹತ್ತಿ ಬೆಳೆದಿರುವ ಹೊಲ ಪ್ರತಿವಾದಿಗೆ ಸೇರಿದ್ದು ಮತ್ತು ಒಂದೇ ಮೇರೆಯಲ್ಲಿ ನಿಮ್ಮ ಜಮೀನು, ಪಡಶೆಟ್ಟಿ ಶರಣಪ್ಪ, ಶಿವಕುಮಾರ ಇವರ ಜಮೀನು ಬರುತ್ತದೆ ಎಂದರೆ ಸರಿ. ನಾಲಾ ದಾಟಿದ ಮೇಲೆ ಪ್ರತಿವಾದಿಯ ಮನೆ ಬರುತ್ತದೆ ಎಂದರೆ ಸರಿ. ಸಾಕ್ಷಿಯು ಸದರಿ ಛಾಯಾ ಚಿತ್ರವನ್ನು ನೋಡಿ ಗುರುತಿಸಿದ್ದರಿಂದ ನಿ ಡಿ 1 ಎಂದು ಗುರುತಿಸಲಾಯಿತು. ಪ್ರತಿವಾದಿ ತನ್ನ ಹೊಲದ ಸಲುವಾಗಿ ನಿಮ್ಮ ಮತ್ತು ನಿಮ್ಮ ಸಹೋದರರ ಮೇಲೆ ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ನಂಬರ್ 15/2025 ರಂತೆ ದಾವಾ ಸಲ್ಲಿಸಿದ್ದಾರೆ ಎಂದರೆ ಸರಿ. ಪ್ರತಿವಾದಿಯ ಜಮೀನಿಗೆ ನೀವೆ ತಕರಾರು ಮಾಡಿದ್ದೀರಾ ಆ ಕಾರಣಕ್ಕೆ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿದ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ**/-**

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ